**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:10-10-2012ರಂದು ನಡೆದ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಪುಟ್ಟಮ್ಮ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಬಿ.ಎಸ್.ಮಂಜುನಾಥ ರೆಡ್ಡಿ | ಸದಸ್ಯರು | ಸಲಹೆಗಾರರು |
| 03 | ಹೆಚ್.ಆರ್.ಕೃಷ್ಣಪ್ಪ | ಸದಸ್ಯರು | ಜಂಟಿ ಆಯುಕ್ತರು(ದಾಸರಹಳ್ಳಿ) |
| 04 | ಜಿ.ಹೆಚ್.ರಾಮಚಂದ್ರ | ಸದಸ್ಯರು | ಉಪ ಅರೋಗ್ಯಾಧಿಕಾರಿ(ಯಲಂಹಕ)(ಪಶ್ಚಿಮ) ಮಹಾದೇವಪುರ |
| 05 | ಎಲ್.ರಮೇಶ್ | ಸದಸ್ಯರು | ಸಹಾಯಕ ಕಂದಾಯ ಅಧಿಕಾರಿಗಳು (ಬಿಟಿಎಂ) |
| 06 | ಸುಕಂದ | ಸದಸ್ಯರು | ಸ.ಕಾ.ನಿ.ಅ (ಹಚ್.ಎ.ಎಲ್.ಏರೇಪೋಟ್) (ಚಾಮರಾಜಪೇಟೆ) (ಬಿಟಿಎಂ) |
| 07 | ಎಂ.ಮುನಿಸ್ವಾಮಿ | ಸದಸ್ಯರು | ಹಿರಿಯ ಅರೋಗ್ಯ ಪರಿವೀಕ್ಷಕರು (ದಕ್ಷಿಣ) |
| 08 | ಜಿ.ವರಲಕ್ಷ್ಮಿ | ಸದಸ್ಯರು | |
| 09 | ಎನ್.ಜಯಪಾಲ | ಸದಸ್ಯರು | |
| 10 | ಲಾವಣ್ಯ ಗಣೇಶ್ ರೆಡ್ಡಿ | ಸದಸ್ಯರು | |
| 11 | ಆಶಾ ಸುರೇಶ್ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ:ಅಸ್ಥಾಸ/(ಆ)/35/2011-12** ಆಯುಕ್ತರವರ ಟಿಪ್ಪಣಿ ದಿನಾಂಕ:24-10-2011ರ ರೀತ್ಯಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯದ ಉಪ ಆರೋಗ್ಯಾಧಿಕಾರಿ(ಪಶ್ಚಿಮ) ರಾಮಮಂದಿರ, ಉಪ ವಿಭಾಗದ ವ್ಯಾಪ್ತಿಗೆ ಒಳಪಡುವ ವಾರ್ಡ್ 108 ರಲ್ಲಿನ ಸ್ವತ್ತಿನ ಸಂಖ್ಯೆ:301, 66ನೇ ಅಡ್ಡರಸ್ತೆ 5ನೇ ಬ್ಲಾಕ್ ರಾಜಾಜಿನಗರ, ಬೆಂಗಳೂರು-10. ಈ ಸ್ವತ್ತಿನ ಮಾಲೀಕರಾದ ಡಾ: ಕೆ.ಜೆ.ಜಯಂತಿ, ನಂ:149 5ನೇ ಅಡ್ಡರಸ್ತೆ 10ನೇ ಮುಖ್ಯರಸ್ತೆ,ಆರ್.ಎಂ.ವಿ ಬಡಾವಣೆ,ಸದಾಶಿವನಗೆ,ಬೆಂಗಳೂರು-80.ರಲ್ಲಿ ವಾಸಿಸುತ್ತಿರುವ ಇವರು ಅಂಗಡಿ, ಬೇಕರಿ ಇತ್ಯಾದಿ ಉದ್ದಿಮೆಗಳಿಗೆ ಬಾಡಿಗೆಯನ್ನು ನೀಡಿದ್ದು, ಮಾಲೀಕರು ಸೆಟ್‌ಬ್ಯಾಕ್ ಏರಿಯಾದಲ್ಲಿ ಶೌಚಾಲಯ ನಿರ್ಮಿಸಿದ್ದು, ಬಾಡಿಗೆದಾರರು ಸಮರ್ಪಕವಾಗಿ ನಿರ್ವಹಿಸದೇ ಇರುವುದರಿಂದ ಪಕ್ಕದ ಸ್ವತ್ತಿನ ನಿವಾಸಿಯಾದ ಶ್ರೀಮತಿ.ಗೌರಮ್ಮ ನಂ.300 66ನೇ ಅಡ್ಡರಸ್ತೆ 5ನೇ ಬ್ಲಾಕ್ ರಾಜಾಜಿನಗರ, ಬೆಂಗಳೂರು-10. ರವರು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ರಾಮಮಂದಿರ) ವಿಭಾಗಕ್ಕೆ ದೂರನ್ನು ಸಲ್ಲಿಸಿರುತ್ತಾರೆ.

ಉಪ ಆರೋಗ್ಯಾಧಿಕಾರಿ(ಪಶ್ಚಿಮ)ರವರು ಮತ್ತು ವಾರ್ಡ್ 108 ರ ಹಿರಿಯ ಆರೋಗ್ಯ ಪರಿವೀಕ್ಷಕರು ದಿನಾಂಕ: 17-8-2011ರಂದು ಸ್ವತ್ತಿನ ಸಂಖ್ಯೆ:301, 66ನೇ ಅಡ್ಡರಸ್ತೆ 5ನೇ ಬ್ಲಾಕ್ ರಾಜಾಜಿನಗರ, ಬೆಂಗಳೂರು-10.ಈ ಸ್ಥಳವನ್ನು ಪರಿಶೀಲನೆ ಮಾಡಿ ಈ ಸ್ವತ್ತಿನಲ್ಲಿ ನಡೆಯುತ್ತಿರುವ ಉದ್ದಿಮೆಗಳಿಂದ

ತೊಂದರೆಯಾಗುತ್ತಿರಿವುದರ ಬಗ್ಗೆ, ದಿನಾಂಕ:20-7-2011ರಂದು ಉದ್ದಿಮೆದಾರರುಗಳಾದ ಶ್ರೀ.ಬಿ.ಎನ್. ಕೃಷ್ಣಾರವರು ದಿನಾಂಕ:22-7-2011 ರಂದು ಟೆರೇಸ್ ಮೇಲೆ ಅನಧಿಕೃತವಾಗಿ ನಡೆಸುತ್ತಿರುವ ಕೋಳಿ ಸಾಕಣೆಯನ್ನು ನಿಲ್ಲಿಸಿರುತ್ತಾರೆಂದು ಮತ್ತು ನೆಲಮಹಡಿಯಲ್ಲಿ ಹಾಸಿಗೆ ರಿಪೇರಿ ಮಾಡುವ ಶ್ರೀ.ಇ.ಹಚ್. ಟೋಪಿಸಾಹೇಬ್ ರವರು ಹಾಸಿಗೆ ತಯಾರಿಸುವಾಗ ಹತ್ತಿಯಿಂದ ಹೊರಬರುವ ದೂಳು ಹೊರ ಹೋಗಲು ಪೈಪ್‌ನ್ನು ಅಳವಡಿಸಿರುವುದಾಗಿ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.

ಶ್ರೀ.ಇ.ಹಚ್.ಟೋಪಿಸಾಹೇಬ್ ರವರು ಪಾಲಿಕೆಯಿಂದ ಪರವಾನಗಿಯನ್ನು ಪಡೆದು ಹಾಸಿಗೆ ರಿಪೇರಿ ಉದ್ದಿಮೆಯನ್ನು ನಡೆಸುತ್ತಿದ್ದು,ನೋಟಿಸ್‌ಗೆ ನೀಡಿರುವ ಸಮಜಾಯಿಷಿಯಲ್ಲಿ ಹಾಸಿಗೆಯಿಂದ ಹೊರಬರುವ ದೂಳು ಹೊರ ಹೊಮ್ಮುವುದರಿಂದ ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆ ಉಂಟಾಗುತ್ತದೆಯೇ ಎಂಬುದರ ಬಗ್ಗೆ ಪರಿಶೀಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿರವರಿಗೆ ಪತ್ರ ಬರೆಯಲಾಗಿ. ಸದರಿ ಮಂಡಳಿಯವರಿಂದ ಶ್ರೀ.ಇ.ಹಚ್.ಟೋಪಿಸಾಹೇಬ್ ರವರು ಹಾಸಿಗೆ ರಿಪೇರಿ ಮಾಡುವಾಗ ಹತ್ತಿಯಿಂದ ಹೊರಬರುವ ದೂಳುಗಳನ್ನು ನಿಯಂತ್ರಣ ಮಾಡಲು ಸುಮಾರು ನಲವತ್ತು ಅಡಿ ಎತ್ತರದ ಕೊಳವೆಯನ್ನು ಅಳವಡಿಸಲಾಗಿದ್ದು, ಸದರಿ ಹಾಸಿಗೆ ಅಂಗಡಿಯಿಂದ ದೂಳು ಹೊರಹೊಮ್ಮುವುದು ಕಂಡು ಬಂದಿರುವುದಿಲ್ಲ ವೆಂದು ವರದಿಯಲ್ಲಿ ತಿಳಿಸಿರುತ್ತಾರೆ.

ಅದರಂತೆ, ದೂರುದಾರರಾದ ಶ್ರೀಮತಿ.ಗೌರಮ್ಮ ನವರಿಗೆ ದೂರಿನ ಬಗ್ಗೆ ಕ್ರಮ ಕೈಗೊಂಡಿರುವುದರ ಬಗ್ಗೆ ವಿವರಣೆಯನ್ನು ನೀಡಲಾಗಿರುತ್ತದೆ ಮತ್ತೆ ದೂರುದಾರರು ಮೌಖಿಕವಾಗಿ ದೂರನ್ನು ನೀಡಿರುತ್ತಾರೆ. ಇದರ ಮೇರೆಗೆ ದಿನಾಂಕ:05-09-2011 ರಂದು ಆರೋಗ್ಯಾಧಿಕಾರಿ(ಪಶ್ಚಿಮ)ರವರು ಉಪ ಆರೋಗ್ಯಾಧಿಕಾರಿ(ಪಶ್ಚಿಮ) ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರೊಂದಿಗೆ ತಪಾಸಣೆ ಮಾಡಲಾಗಿ, ಆ ದಿವಸ ದೂರುದಾರರ ಮನೆಯಲ್ಲಿ ಯಾರೂ ಇಲ್ಲದೇ ಇರುವುದರ ಪ್ರಯುಕ್ತ ದಿನಾಂಕ:08-09-2011 ರಂದು ಹಿರಿಯ ಆರೋಗ್ಯ ಪರಿವೀಕ್ಷಕರು ತಪಾಸಣೆ ಮಾಡಲಾಗಿ, 3ನೇ ಮಹಡಿಯಲ್ಲಿ ಟಿವಿ,ಹೋಮ್ ಥಿಯೇಟರ್ ಮತ್ತು ಶೋಕೇಸ್ ನಲ್ಲಿ ಹಾಸಿಗೆ ತಯಾರಿಸುವ ದೂಳು ಕಂಡುಬಂದಿರುತ್ತದೆ, ಎರಡನೇ ಮಹಡಿಯ ಮನೆ ಬೀಗ ಹಾಕಲಾಗಿರುತ್ತದೆ ಮತ್ತು ಮೊದಲನೇ ಮಹಡಿಯ ಎಮರ್ಜೆನ್ಸಿ ಲ್ಯಾಬ್‌ನಲ್ಲಿ ಹಾಸಿಗೆ ದೂಳು ಇರುವುದು ಕಂಡು ಬಂದಿರುತ್ತದೆ. ಸದರಿ ತಪಾಸಣೆಯ ಉಪ ಆರೋಗ್ಯಾಧಿಕಾರಿ(ಪಶ್ಚಿಮ)ರವರ ವರದಿಯ ಮೇರೆಗೆ ಶ್ರೀ.ಇ.ಹಚ್.ಟೋಪಿಸಾಹೇಬ್ ರವರಿಗೆ, ಪಾಲಿಕೆಯಿಂದ ನೀಡಿರುವ 2ಹಚ್‌ಪಿ ಜಿನ್ನಿಂಗ್ ಮಿಷಿನ್ ಪರವಾನಗಿಯನ್ನು ಆರೋಗ್ಯಾಧಿಕಾರಿ(ಪಶ್ಚಿಮ)ರವರು ರದ್ದು ಪಡಿಸಿರುತ್ತಾರೆ. ಕೇವಲ ಹಾಸಿಗೆಯನ್ನು

ಮಾರಾಟ ಮಾಡಲು ಅನುಮತಿಯನ್ನು ನೀಡಿರುತ್ತಾರೆ, ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ಬೆಸ್ಕಾಂ) ರವರಿಗೆ, ಶ್ರೀ.ಇ.ಹಚ್.ಟೋಪಿಸಾಹೇಬ್ ರವರಿಗೆ ಪಾಲಿಕೆಯಿಂದ ರದ್ದು ಪಡಿಸಿರುವ 2ಹಚ್‌ಪಿಯನ್ನು ಕಡಿತಗೊಳಿಸಲು ಪತ್ರವನ್ನು ಬರೆಯಲಾಗಿರುತ್ತದೆ.

ಮನವಿದಾರರು ಹಾಜರಿದ್ದು ತಮ್ಮ ಹೇಳಿಕೆಯನ್ನು ನೀಡಿ ತಾವು ಕಳೆದ 30 ವರ್ಷಗಳಿಂದ ಹಾಸಿಗೆ ನಿರ್ಮಿಸುವ ಈ ಉದ್ದಿಮೆಯನ್ನು ಮಾಡುತ್ತಿದ್ದು ಈ ಉದ್ದಿಮೆಯಿಂದ ಆಕ್ಕಪಕ್ಕದ ನಿವಾಸಿಗಳಿಗೆ ಯಾವುದೇ ವಿಧವಾದ ತೊಂದರೆ ಉಂಟಿ ಮಾಡಿತ್ತಿಲ್ಲವೆಂದು ತಿಳಿಸುತ್ತಾ, ಆರೋಗ್ಯ ಇಲಾಖೆಯ ಆಧಿಕಾರಗಳ ಆದೇಶದಂತೆ ಹತ್ತಿಯಿಂದ ಬರುವ ದೂಳನ್ನು ಸುಗುಮವಾಗಿ ಹೊರಗೆ ಹೋಗಲು ಅವಕಾಶವಾಗುವಂತೆ ಎತ್ತರದ ಕೊಳವೆಯನ್ನು ಅಳವಡಿಸಿರುವುದಾಗಿ ತಿಳಿಸಿ ತಾವು ಯಾವುದೇ ವಿಧವಾದ ಪರಿಸರ ಮಾಲಿನ್ಯಕ್ಕೆ ಅವಕಾಶ ನೀಡುತ್ತಿಲ್ಲವೆಂದು ತಿಳಿಸುತ್ತಾ ಈ ಉದ್ದಿಮೆಯಿಂದ ಜೀವನ ಸಾಗಿಸುತ್ತಿರುವುದರಿಂದ ತಮಗೆ ಪರವಾನಗಿ ಮಂಜೂರು ಮಾಡಿಕೊಡಲು ಕೋರಿರುತ್ತಾರೆ. ಹಾಜರಿದ್ದ ಆಧಿಕಾರಿಗಳು ಸಹ ಸದರಿ ಉದ್ದಿಮೆಯಿಂದ ಹೊರ ಬರುವ ದೂಳು ಸುಗುಮವಾಗಿ ಹೊರೆಗೆ ಹೋಗುವ ಸಲುವಾಗಿ ಮನವಿದಾರರು ಸುಮಾರು 40 ಅಡಿ ಉದ್ದನೆಯ ಪೈಪನ್ನು ಅಳವಡಿಸಿರುವುದಾಗಿ ತಿಳಿಸಿರುತ್ತಾರೆ.

ನೇರೆಯ ಸ್ವತ್ತಿನ ಮಾಲಿಕರ ಪ್ರತಿನಿಧಿಗಳು ತಮ್ಮ ಹೇಳಿಕೆಯಲ್ಲಿ ಈ ಉದ್ದಿಮೆಯಿಂದ ಇಲ್ಲಿನ ಪರಸರವು ಸಾಕಷ್ಟು ಕಲುಶಿತಗೊಂಡಿದ್ದು ಮನೆಯಲ್ಲಿ ವಾಸಿಸಲು ಕಷ್ಟಕರವಾಗಿರುವುದರಿಂದ ಹಾಗು ಈ ಉದ್ದಿಮೆಯಿಂದ ಹಲವಾರು ಸಂಕ್ರಾಮಿಕ ರೋಗಗಳಿಗೆ ಅವಕಾಶ ಕಲ್ಪಿಸಿಕೊಟ್ಟಂತಾಗುವುದರಿಂದ ಪರವಾನಗಿ ನೀಡುವುದು ಸಮಂಜಸಕರವಲ್ಲವೆಂದು ಹೇಳಿಕೆ ನೀಡಿರುತ್ತಾರೆ.

**ನಿರ್ಣಯ:-** ಮನವಿದಾರರ ಹಾಗು ನರೆಮನೆಯ ಮಾಲಿಕರ ಪ್ರತಿನಿಧಿಗಳ ವಾದವನ್ನು ಕೇಳಲಾಯಿತು. ಆಧಿಕಾರಿಗಳು ಈ ಉದ್ದಿಮೆಯಲ್ಲಿನ ಪರವಾನಗಿದಾರರು ದೂಳು ಸುಗಮವಾಗಿ ಹೊರಗೆ ಹೋಗಲು ಅನುಕೂಲವಾಗುವಂತೆ 40 ಅಡಿಗಳ ಕೊಳವೆಯನ್ನು ಅಳವಡಿಸಿರುವುದಾಗಿ ತಿಳಿಸಿರುವುದರಿಂದ ಹಾಗು ನೇರೆಮನೆಯ ಆಸ್ತಿಯ ಮಾಲಿಕರು ಹಾಗು ಅವರ ಪ್ರತಿನಿಧಿಗಳು ಪ್ರಸ್ಥಾವಿತ ಪ್ರದೇಶದಲ್ಲಿ ವಾಸ ಮಾಡದೆ ಇರುವುದು ಸ್ಪಷ್ಟವಾಗಿದ್ದು ಅವರನ್ನು ಹೊರತು ಪಡಿಸಿ ನೆರೆಹೊರೆಯಲ್ಲಿ ವಾಸವಾಗಿರುವವರುಗಳಿಂದ ಯಾವುದೇ ವಿಧವಾದ ಆಕ್ಷೇಪಣೆಗಳು ಇಲ್ಲದಿರುವುದರಿಂದಲೂ, ಉದ್ದಿಮೆದಾರರು ಕಳೆದ 30 ವರ್ಷಗಳಿಂದ ಮೇಲ್ಕಂಡ ಉದ್ದಿಮೆಯನ್ನು ಜೀವನೋಪಾಯಕ್ಕಾಗಿ ನಡೆಸುತ್ತಿದು ದೂರುದಾರರು ಇಲ್ಲಿಯವರೆವಿಗೂ ಯಾವುದೇ ವಿಧವಾದ ಆಕ್ಷೇಪಣೆಗಳನ್ನು ಸಲ್ಲಿಸದೆ ಪ್ರಸುತ್ತ ಈ ಉದ್ದಿಮೆಯಿಂದ ಪರಿಸರ ಕಲುಶಿತವಾಗುತ್ತಿರುವುದಾಗಿ ನೀಡಿರುವ ಹೇಳಿಕೆಯು ನಂಬಲರ್ಹವಾಗಿಲ್ಲದಿರುವುದರಿಂದ ಆಕ್ಷೇಪಣೆದಾರರ ಹೇಳಿಕೆಯನ್ನು ಪರಿಗಣಿಸಲು ಸಾಧ್ಯವಿಲ್ಲದಿದ್ದು ಅರ್ಜಿದಾರರಾದ ಶ್ರೀ.ಇ.ಹಚ್.ಟೋಪಿಸಾಹೇಬ್ ರವರ ಮನವಿಯನ್ನು ಪರಿಗಣಿಸಿ ಅವರು ಜೀವನೋಪಾಯಕ್ಕಾಗಿ ನಡೆಸುತ್ತಿರುವ ಉದ್ದಿಮೆಯನ್ನು ಅಕ್ಕಪಕ್ಕದ ನಿವಾಸಿಗಳಿಗೆ ಆಡಚಣೆ ಉಂಟು ಮಾಡದಂತೆ ನಡೆಸಿಕೊಂಡು ಹೋಗಲು ಅನುಕೂಲವಾಗುವಂತೆ ಪರವಾನಗಿ ಮಂಜೂರು ಮಾಡಲು ಆರೋಗ್ಯಾಧಿಕಾರಿಗಳಿಗೆ ಆದೇಶ ನೀಡಲು ಸಮಿತಿಯು ತೀರ್ಮಾನಿಸಿದೆ.

**ವಿಷಯ:ಸಂಖ್ಯೆ:ಅಸ್ಥಾಸ/(ಆ)/15/2012-13** ವಿಶೇಷ ಆಯುಕ್ತರು ರವರು ಟಿಪ್ಪಣಿ ದಿನಾಂಕ:18-08-2012ರ ರೀತ್ಯಾ ಡಾ: ಎಸ್.ಸಿ.ಶರ್ಮ, ಸೆಂಟರ್ ಫಾರ್ ಹೆಲ್ತ್ & ಹಾರ್ಟ್, ನಂ.1803, 39ನೇ ಎಫ್ ಕ್ರಾಸ್, 18ನೇ ಮುಖ್ಯರಸ್ತೆ, 4ನೇ ಟಿ ಬ್ಲಾಕ್, ಜಯನಗರ ಬೆಂಗಳೂರು-41. ರವರು ದಿನಾಂಕ:4-6-2012ರಂದು ದೂರು ಸಲ್ಲಿಸಿ ನಂ.1446/ಎ, 39ನೇ ಎಫ್ ಕ್ರಾಸ್, 18ನೇ ಮುಖ್ಯ ರಸ್ತೆ 4ನೇ ಟಿ ಬ್ಲಾಕ್, ಜಯನಗರ ಬೆಂಗಳೂರು-41. ರಲ್ಲಿ ವಾಣಿಜ್ಯ ಚಟುವಟಿಕೆ ಉದ್ದಿಮೆಗಳಿಗೆ ಪರವಾನಗಿ ನೀಡಬಾರದೆಂದು ಕೋರಿರುತ್ತಾರೆ, ಹಾಗೂ ಈ ಬಗ್ಗೆ ನ್ಯಾಯಾಲಯದಲ್ಲಿ Injuction Suite ದಾವೆ ಇರುತ್ತದೆ ಎಂದು ಪ್ರತಿಯನ್ನು ಲಗತ್ತಿಸಿ ಹಾಗೂ ಮಾನ್ಯ ಲೋಕಾಯುಕ್ತ ಕಛೇರಿಯಲ್ಲಿ ದೂರು ದಾಖಲಿಸಿರುವುದಾಗಿ ಸದರಿ ಪ್ರತಿಯನ್ನು ಲಗತ್ತಿಸಿ ಸಲ್ಲಿಸಿರುತ್ತಾರೆ. ಶ್ರೀ.ತಿರುವೆಂಗಡಮೂರ್ತಿ ಎಂ ರವರು ದಿನಾಂಕ:18-06-2012 ರಂದು ಸ್ವೀಟ್ ಮತ್ತು ಬೇಕರಿ ಪದಾರ್ಥ ಮಾರಾಟ ಮಾಡಲು ಉದ್ದಿಮೆ ಪರವಾನಗಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಕಟ್ಟಡದ ಮಾಲೀಕರಾದ ಶ್ರೀ.ರವಿರಾಜ್ ಶೆಟ್ಟಿ.ಎಂ. ನಂ.1446/ಎ (1) 39ನೇ ಎಫ್ ಕ್ರಾಸ್, 18ನೇ ಮುಖ್ಯ ರಸ್ತೆ 4ನೇ ಟಿ ಬ್ಲಾಕ್ ಜಯನಗರ ಬೆಂಗಳೂರು-41. ರವರು ಈ ಕಟ್ಟಡದ ಉಪಯೋಗವನ್ನು ಅನಧಿಕೃತವಾಗಿ ವಾಣಿಜ್ಯ ಉಪಯೋಗಕ್ಕೆ ಬಳಸುತ್ತಿರುವುದರಿಂದ ಉದ್ದಿಮೆ ಪರವಾನಗಿ ನೀಡುವಲ್ಲಿ ನಿಯಮಾನುಸಾರ ಕ್ರಮ ಜರುಗಿಸಬಹುದೆಂದು ಜಯನಗರ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಅಭಿಪ್ರಾಯ ತಿಳಿಸಿರುತ್ತಾರೆ. ಸದರಿ ಕಟ್ಟಡದ ಬಗ್ಗೆ ನ್ಯಾಯಾಲಯದಲ್ಲಿ" Injuction Suite" OS No.8740/2011-12, dated: 13-12-2011 ಇರುತ್ತದೆ.ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ಅರ್ಜಿದಾರರು ಕೋರಿಕೊಂಡಿರುವ ಸ್ವೀಟ್ ಮತ್ತು ಬೇಕರಿ ಉದ್ದಿಮೆ ಪರವಾನಗಿ ಅರ್ಜಿಯನ್ನು ತಿರಸ್ಕರಿಸಿ ಸಂಬಂಧಪಟ್ಟ ಉಪ ಆರೋಗ್ಯಾಧಿಕಾರಿಗಳು ಹಿಂಬರಹ ನೀಡಿರುತ್ತಾರೆ. ಹಿಂಬರಹದ ವಿರುದ್ದ ಮೇಲ್ಮನವಿ ಸಲ್ಲಿಸಿರುತ್ತಾರೆ.

ಮೇಲ್ಮನವಿದಾರರು ಹಾಜರಿದ್ದು ಹೇಳಿಕೆ ನೀಡಿ ತಾವು ಈ ಕಟ್ಟಡದಲ್ಲಿ ಸಹಿ ತಿನಿಸುಗಳನ್ನು ಮಾರಾಟ ಮಾಡುತ್ತಿದ್ದು ಈ ಕಟ್ಟಡದಲ್ಲಿ 22 ವರ್ಷಗಳಿಂದ Party Hall ನಡೆಸುತ್ತಿದ್ದು ಹಾಗೂ ಈ ರಸ್ತೆಯಲ್ಲಿ ಹಲವಾರು ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿದ್ದು ಕೇವಲ ನನ್ನ ಉದ್ದಿಮೆಗೆ ಮಾತ್ರ ಆಕ್ಷೇಪಣೆ ಸಲ್ಲಿಸಿರುವುದು ಸಮಂಜಸವಲ್ಲವೆಂದು ತಿಳಿಸಿ ತಾವು ಈ ಉದ್ದಿಮೆ ನಡೆಸುವ ಸಲುವಾಗಿ ಸುಮಾರು 25 ಲಕ್ಷ ರೂಗಳನ್ನು ವೆಚ್ಚ ಮಾಡಿರುವುದಾಗಿ ತಿಳಿಸಿ ತಮ್ಮ ಉದ್ದಿಮೆಗೆ ಪರವಾನಗಿ ನೀಡಲು ಕೋರಿರುತ್ತಾರೆ. ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರು ತಮ್ಮ ಹೇಳಿಕೆಯಲ್ಲಿ ಕಳೆದ 22 ವರ್ಷಗಳಿಂದ ಈ ಸ್ವತ್ತಿನಲ್ಲಿ Party Hall ನಡೆಯುತ್ತಿದ್ದು ಹಾಲಿ ಸಿಹಿ ತಿಂಡಿಗಳ ಮಾರಾಟ ಮಾಡಲು ಅರ್ಜಿಯನ್ನು ಸಲ್ಲಿಸಿದ್ದು ಅಕ್ಕಪಕ್ಕದ ನಿವಾಸಿಗಳು ಈ ಉದ್ದಿಮೆ ನಡೆಸಲು ಆಕ್ಷೇಪಣೆ ಸಲ್ಲಿಸಿರುವುದರಿಂದ ಪರವಾನಗಿ ನೀಡಲಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

**ನಿರ್ಣಯ:-** ಕಡತವನ್ನು ಹಾಗು ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಯಿತು. ಮನವಿದಾರರ ಹೇಳಿಕೆಯಲ್ಲಿನ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಸ್ವತ್ತಿನಲ್ಲಿ ಕಳೆದ 22 ವರ್ಷಗಳಿಂದ Party Hall ಒಂದು ನಡೆಯುತ್ತಿದ್ದು ಆ ಸಂದರ್ಭದಲ್ಲಿ ಅಕ್ಕಪಕ್ಕದ ನಿವಾಸಿಗಳು ತಮ್ಮಗಳ ಆಕ್ಷೇಪಣೆಯನ್ನು ಸಲ್ಲಿಸದೆ ಇದು ಹಾಲಿ ಸಿಹಿ ತಿಂಡಿ ವ್ಯಾಪಾರ ನಡೆಸುವ ಸಂಬಂಧ ಪರವಾನಗಿ ಕೋರಿದ ಸಂದರ್ಭದಲ್ಲಿ ಅಕ್ಕಪಕ್ಕದವರು ಆಕ್ಷೇಪಣೆ ಸಲ್ಲಿಸುತ್ತಿರುವುದು ಸಮಂಜಸಕರವಲ್ಲವೆಂಬ ಅಂಶವನ್ನು ಪರಿಗಣಿಸಿ ಹಾಗು ಅರ್ಜಿದಾರರು ಸುಮಾರು ರೂ 22 ಲಕ್ಷಗಳಷ್ಟು ಹಣವನ್ನು ವ್ಯಯ ಮಾಡಿ ತಮ್ಮ

ಜೀವನೋಪಾಯಕ್ಕಾಗಿ ಈ ಉದ್ದಿಮೆಯನ್ನು ಪ್ರಾರಂಭಿಸಲು ಉದ್ದೇಶಿಸಿರುವ ಹಿನ್ನೆಲೆಯಲ್ಲಿ ಹಾಗು ಸಿಹಿ ತಿಂಡಿ ಅಂಗಡಿಯನ್ನು ನಡೆಸುವುದರಿಂದ ಯಾವುದೇ ವಿಧವಾದ ಪರಿಸರ ಮಾಲೀನ್ಯ ಉಂಟಾಗದೆ ಇರುವುದರಿಂದಲೂ ಮತ್ತು ಈ ಪ್ರದೇಶದಲ್ಲಿ ಸಾಕಷ್ಟು ವಾಣಿಜ್ಯ ಚಟುವಟಿಕೆ ನಡೆಯುತ್ತಿರುವುದರಿಂದ ಅರ್ಜಿದಾರರ ಮೇಲ್ಮನವಿಯನ್ನು ಪರಿಗಣಿಸಿ ಉದ್ದಿಮೆ ನಡೆಸುವುದರಿಂದ ಅಕ್ಕಪಕ್ಕದ ನಿವಾಸಿಗಳಿಗೆ ಅಡಚಣೆ ಉಂಟಾಗದಂತೆ ಎಚ್ಚರ ವಹಿಸಲು ಸೂಚಿಸಿ ಕೂಡಲೆ ಉದ್ದಿಮೆ ಪರವಾನಗಿ ಮಂಜೂರು ಮಾಡಲು ಕ್ರಮ ಕೈಗೊಳ್ಳಲು ಆರೋಗ್ಯಾಧಿಕಾರಿಗಳಿಗೆ ಸೂಚಿಸಲು ಸಮಿತಿಯು ತೀರ್ಮಾನಿಸಿದೆ.

**ವಿಷಯ:ಸಂಖ್ಯೆ:ಅಸ್ಥಾಸ/(ಆ)/19/2012-13** ಆಯುಕ್ತರುರವರ ಟಿಪ್ಪಣಿ ದಿನಾಂಕ:10-09-2012ರ ರೀತ್ಯಾ,ಬೃಹತ್ ಬೆಂಗಳೂರು ಮಹಾನನಗರ ಪಾಲಿಕೆ, ಹೆಚ್.ಎ.ಎಲ್. ಏರ್‌ಪೋರ್ಟ್ ಉಪ ವಿಭಾಗದ ವಿಜ್ಞಾನನಗರ ವಾರ್ಡಿನ ಎಂ.ಪಿ.ಆರ್.ರೀಜೇನ್ಸಿ ನಂ.172/2, 6ನೇ ಮುಖ್ಯ,2ನೇ ಅಡ್ಡರಸ್ತೆ, ಬಿ.ನಾರಾಯಣಪುರ, ಮಹದೇವಪುರ ಎಕ್ಸ್‌ಟೆಕ್ಷನ್, ಬೆಂಗಳೂರು-16. ವಿಳಾಸದ ಶ್ರೀ.ಅಬ್ದುಲ್ ನಜರ್ ರವರು ಉದ್ದಿಮೆಯ ಮಾಲೀಕರು ಮೆ: ಬೆಸ್ಟ್‌ಫುಡ್ ಎಂಟರ್ ಪ್ರೈಸಸ್ ಉದ್ದಿಮೆಗೆ ಪರವಾನಗಿ ಕೋರಿ ದಿನಾಂಕ:2-2-2012ರಂದು ಅರ್ಜಿ ಸಲ್ಲಿಸಿರುತ್ತಾರೆ.ಈ ವಿಳಾಸದಲ್ಲಿ ಅನಧಿಕೃತವಾಗಿ ಉದ್ದಿಮೆ ನಡೆಸುತ್ತಿದ್ದು, ಸದರಿ ಉದ್ದಿಮೆಯಿಂದ ಸ್ಥಳೀಯ ನಾಗರೀಕರಿಗೆ ತೊಂದರೆಯುಂಟಾಗುತ್ತಿದೆ ಎಂದು ಎಸ್.ಆರ್.ಆರ್. ಲೇಔಟ್ ರೆಸಿಡೆನ್ಸಿಯಲ್ ಆಸೋಷಿಯೇಶನ್ ರವರು ದೂರನ್ನು ನೀಡಿರುತ್ತಾರೆ. ದಿನಾಂಕ:02-02-2012ರಂದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿ ಸದರಿ ಉದ್ದಿಮೆಯು ಅನಧಿಕೃತವಾಗಿ ನಡೆಯುತ್ತಿರುವುದು ಕಂಡು ಬಂದಿರುತ್ತದೆ.

ಉದ್ದಿಮೆ ಪರವಾನಗಿ ಅರ್ಜಿ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನ್ಯತೆಗಳು ಕಂಡು ಬಂದಿರುತ್ತದೆ.

1. ಕಟ್ಟಡವು ವಸತಿ ಪ್ರದೇಶದಲ್ಲಿದ್ದಿ, ವಸತಿಯೇತರವಾಗಿ ಪರಿವರ್ತಿಸಿರುವುದಿಲ್ಲ.
2. ಕಟ್ಟಡದ ಮಂಜೂರಾತಿ ನಕ್ಷೆಯನ್ನು ನೀಡಿರುವುದಿಲ್ಲ.
3. Occupancy Certificate
4. ನೆರೆ-ಹೊರೆ ರವರ ಒಪ್ಪಿಗೆ ಪತ್ರವನ್ನು ಸಮರ್ಪಕವಾಗಿ ನೀಡಿರುವುದಿಲ್ಲ, ಎಂದು ದಿನಾಂಕ: 17-2-2012ರಂದು ಉದ್ದಿಮೆದಾರರಿಗೆ ಹಿಂಬರಹ ನೀಡಿ ಸ್ವೀಕೃತಿಯನ್ನು ಪಡೆಯಲಾಗಿದೆ.

ಸದರಿ ಕಟ್ಟಡದ ಬಗ್ಗೆ ಪೂರ್ತಿ ಮಾಹಿತಿಗಾಗಿ 1) ಸಹ ಕಂದಾಯಾಧಿಕಾರಿಗಳು ಹೆಚ್.ಎ.ಎಲ್. ಏರ್‌ಪೋರ್ಟ್ ವಿಭಾಗ, 2) ಎ.ಡಿ.ಟಿ.ಪಿ ಕೆ.ಆರ್.ಪುರಂ 3) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರು ರವರಿಗೆ ದಿನಾಂಕ:17-2-2012 ರಂದು ಪತ್ರ ಬರೆದು ವರದಿಯನ್ನು ನೀಡಲು ಕೋರಲಾಯಿತು.

ಶ್ರೀ.ಅಬ್ದುಲ್ ನಜರ್ ರವರಿಗೆ ದಿನಾಂಕ:17-02-2012ರಂದು ಹಿಂಬರಹ ನೀಡಲಾಗಿದ್ದು, ಸದರಿಯವರು ಹಿಂಬರಹಕ್ಕೆ ಪ್ರತಿಯಾಗಿ ಯಾವುದೇ ಉತ್ತರ ನೀಡಿರುವುದಿಲ್ಲ. ಎ.ಡಿ.ಟಿ.ಪಿ ಹೊರತು ಪಡಿಸಿ ಉಳಿದ ಇಲಾಖೆಗಳಿಂದ ಉತ್ತರ ಬಂದಿರುವುದಿಲ್ಲ, ಎ.ಡಿ.ಟಿ.ಪಿ ಕೆ.ಆರ್.ಪುರಂ ರವರು ಕಟ್ಟಡದ ಬಗ್ಗೆ

ಜೆ.ಡಿ.ಟಿ.ಪಿ.ರವರಿಂದ ಮಾಹಿತಿ ಪಡೆಯಲು ತಿಳಿಸಿರುತ್ತಾರೆ. ಸದರಿ ವಿಷಯವು ನಗರ ಯೋಜನೆ ಶಾಖೆ ವ್ಯಾಪ್ತಿಗೆ ಬರುವುದರಿಂದ ಕಟ್ಟಡದ ಬಗ್ಗೆ ಮಾಹಿತಿಯನ್ನು ನೀಡಲು ಪುನ: ದಿನಾಂಕ:25-04-2012ರಂದು ಪತ್ರ ಬರೆಯಲಾಯಿತು. ಸಹಕಂದಾಯಾಧಿಕಾರಿಗಳು ಹಚ್.ಎ.ಎಲ್. ಏರ್‌ಪೋರ್ಟ್, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರು ರವರಿಗೆ ಪುನ: ದಿನಾಂಕ: 25-04-2012ರಂದು ತಕ್ಷಣ ಮಾಹಿತಿ ನೀಡಲು ಪತ್ರ ಬರೆಯಲಾಯಿತು.

ದಿನಾಂಕ: 06-07-2012 ರಂದು ಪುನ: ಎ.ಡಿ.ಟಿ.ಪಿ ಕೆ.ಆರ್.ಪುರಂ ವಿಭಾಗ ಸಹಕಂದಾಯ ಅಧಿಕಾರಿಗಳು ಹಚ್.ಎ.ಎಲ್. ಏರ್‌ಪೋರ್ಟ್ ವಿಭಾಗ ರವರಿಗೆ 3ನೇ ಪತ್ರ ಬರೆಯಲಾಯಿತ್ತು. ತಹಿಲ್‌ವರೆಗೆ ಎ.ಡಿ.ಟಿ.ಪಿ ಮತ್ತು ಸಹಕಂದಾಯಾಧಿಕಾರಿಗಳಿಂದ ಯಾವುದೇ ಉತ್ತರ ಬಂದಿರುವುದಿಲ್ಲ. ನಂತರ ಎಸ್.ಆರ್.ಆರ್. ಲೇಔಟ್ ರೆಸಿಡೆನ್ಸಿಯಲ್ ಆಸೋಷಿಯೇಶನ್ ರವರು ಪುನ: ದಿನಾಂಕ: 24-07-2012 ರಂದು ದೂರು ನೀಡಿದಾಗ ಮೇರೆಗೆ ಉದ್ದಿಮೆಯನ್ನು ಮುಚ್ಚಲು ಪ್ರಾರಂಭ ಮಾಡಲಾಗುತ್ತಿತ್ತು. ಅಷ್ಟರಲ್ಲಿ ದಿನಾಂಕ: 02-08-2012ರಂದು ಮಾನ್ಯ ಅಧ್ಯಕ್ಷರು ಅಪೀಲುಗಳ ಸ್ಥಾಯಿ ಸಮಿತಿ ರವರ ಪತ್ರ ತಲುಪಿದ ನಂತರ ಈ ಕಾರ್ಯವನ್ನು ಸ್ಥಗಿತ ಗೊಳಿಸಲಾಯಿತು.

ಮೆ: ಬೆಸ್ಟ್‌ಫುಡ್ ಎಂಟರ್ ಪ್ರೈಸಸ್ ಉದ್ದಿಮೆಗೆ 1)ಕಟ್ಟಡವು ವಸತಿ ಪ್ರದೇಶದಲ್ಲಿ ಇದ್ದು,ವಸತಿಯೇತರವಾಗಿ ಪರಿವರ್ತಿಸಿರುವುದಿಲ್ಲ. 2)ಕಟ್ಟಡದ ಮಂಜೂರಾತಿ ನಕ್ಷೆಯನ್ನು ನೀಡಿರುವುದಿಲ್ಲ. 3) Occupancy Certificate, 4) ನೆರೆ-ಹೊರೆ ರವರ ಒಪ್ಪಿಗೆ ಪತ್ರವನ್ನು ಸಮರ್ಪಕವಾಗಿ ನೀಡಿರುವುದಿಲ್ಲ. ಈ ಕಾರಣಗಳಿಂದ ಪರವಾನಗಿಯನ್ನು ತಿರಸ್ಕರಿಸಲಾಗಿದ್ದು, ಇದಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಲಗತ್ತಿಸಿ ಮಾನ್ಯ ಅಧ್ಯಕ್ಷರು ಅಪೀಲುಗಳ ಸ್ಥಾಯಿ ಸಮಿತಿ ರವರ ಅವಗಾಹನೆಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಮಂಡಿಸಿದೆ.

ಅರ್ಜಿದಾರರು ಹಾಜರಿದ್ದು ಹೇಳಿಕೆ ನೀಡುತ್ತಾ ತಾವು ಈ ಸ್ವತ್ತಿನಲ್ಲಿ ಬೇಕರಿ ಉದ್ದಿಮೆ ನಡೆಸುತ್ತಿರುವುದಾಗಿ ತಿಳಿಸಿ ಮನವಿ ಸಲ್ಲಿಸಿದ್ದು ಆಧಿಕಾರಿಗಳಿಗೆ ಪರವಾನಗಿ ಮಂಜೂರಾತಿ ನೀಡುವ ಸಂಬಂಧ ಆಕ್ಷೇಪಣೆ ಇರುವುದರಿಂದ ಪರವಾನಗಿ ಮಂಜೂರಾತಿ ನೀಡದೆ ಇದ್ದು ತಾವು ಈ ಉದ್ದಿಮೆ ಪ್ರಾರಂಭಿಸಲು ಸಾಕಷ್ಟು ಹಣವನ್ನು ವೆಚ್ಚ ಮಾಡಿರುವುದಾಗಿ ತಿಳಿಸಿ ಉದ್ದಿಮೆಗೆ ಪರವಾನಗಿ ಮಂಜೂರು ಮಾಡಲು ಕೋರಿರುತ್ತಾರೆ. ಆಧಿಕಾರಿಗಳು ಗೈರು ಹಾಜರಾಗಿರುತ್ತಾರೆ

**ನಿರ್ಣಯ:-** ಕಡತವನ್ನು ಮತ್ತು ಕಡತದಲ್ಲಿನ ದಾಖಲೆಗಳನ್ನು ಅವಲೋಕಿಸಲಾಯಿತು, ಹಾಗು ಮನವಿದಾರರ ಹೇಳಿಕೆಯನ್ನು ಪರಿಶೀಲಿಸಿ ಮನವಿದಾರರು ಉದ್ದಿಮೆ ನಡೆಸುವ ಸಲುವಾಗಿ ಸಾಕಷ್ಟು ಸಂಖ್ಯೆಯಲ್ಲಿ ನೌಕರರುಗಳನ್ನು ನೇಮಿಸಿಕೊಂಡಿದ್ದು ಹಾಗು ಈ ಸಲುವಾಗಿ ಸಾಕಷ್ಟು ವೆಚ್ಚವನ್ನು ಮಾಡಿರುವುದರಿಂದ ಇವರ ಮನವಿಯನ್ನು ಮಾನವೀಯತೆ ದ್ರುಷ್ಟಿಯ ಆಧಾರದ ಮೇಲೆ ಪರಿಗಣಿಸಿ ಉದ್ದಿಮೆ ನಡೆಸುವುದರಿಂದ ಆಕ್ಕಪಕ್ಕದ ನಿವಾಸಿಗಳಿಗೆ ತೊಂದರೆ ಉಂಟಾಗದಂತೆ ಎಚ್ಚರ ವಹಿಸಲು ಸೂಚಿಸಿ ಪರವಾನಗಿ ಮಂಜೂರು ಮಾಡುವಂತೆ ಆರೋಗ್ಯಾಧಿಕಾರಿಗಳಿಗೆ ಸೂಕ್ತ ಆದೇಶ ನೀಡಲು ತೀರ್ಮಾನಿಸಲಾಯಿತು.

-6-

**ವಿಷಯ:ಸಂಖ್ಯೆ:ಅಸ್ಥಾಸ/(ಆ)/18/2012-13** ವಿಶೇಷ ಆಯುಕ್ತರುರವರ ಟಿಪ್ಪಣಿ ದಿನಾಂಕ:18-08-2012ರ ರೀತ್ಯಾ ಶ್ರೀ.ಸಂದೀಪ್ ಡಿ ರಟಾಡಿಯ ನಂ.460 ಹೊಸ ನಂ.20/1 3ನೇ ಹಂತಸ್ತು 8ನೇ ಬಿ ಮುಖ್ಯರಸ್ತೆ.ಜಯನಗರ ಈ ಕಟ್ಟಡದ 3ನೇ ಮಹಡಿಯಲ್ಲಿ ವೆಚ್ ಬೈ ನೇಚರ್( Veg by nature) ಎಂಬ ರೆಸ್ಟೋರೆಂಟ್ ಉದ್ದಿಮೆ ಪ್ರಾರಂಭಿಸಲು ಅರ್ಜಿ ಸಲ್ಲಿಸಿದ್ದು, ಉದ್ದಿಮೆಗೆ ಸಂಬಂಧಪಟ್ಟ ಕಡತವನ್ನು ಪರಿಶೀಲಿಸಿ ಅಗತ್ಯ ದಾಖಲೆಗಳು ನೀಡಿಲ್ಲದಿರುವ ಬಗ್ಗೆ ಹಾಗೂ ಸದರಿ ಸ್ಥಳದಲ್ಲಿ ಉದ್ದಿಮೆ ನಡೆಸಲು ಆಕ್ಷೇಪಣೆ ಇರುವ ಬಗ್ಗೆ ದಿನಾಂಕ: 12-06-2012 ರಂದು ಅರ್ಜಿದಾರರಿಗೆ ಉಪ ಆರೋಗ್ಯಾಧಿಕಾರಿ(ದಕ್ಷಿಣ) ಜಯನಗರ ರವರು ಹಿಂಬರಹ ನೀಡಿರುತ್ತಾರೆ. ಅರೋಗ್ಯ ಇಲಾಖೆಯಿಂದ ನೀಡಿದ ಹಿಂಬರಹಕ್ಕೆ ಅರ್ಜಿದಾರರಾದ ಶ್ರೀ.ಸಂದೀಪ್ ಡಿ ರಟಾಡಿಯ ರವರು ಉದ್ದಿಮೆ ಪರವಾನಗಿ ಶುಲ್ಕವನ್ನು ಡಿ.ಡಿ.ಮುಖಾಂತರ ಲಗತ್ತಿಸಿ ಲಿಖಿತ ಮೂಲಕ ಮತ್ತು ಉದ್ದಿಮೆ ಉದೇಶಿತ ಸ್ಥಳದ ಈ ಮೇಲ್ಕಂಡ ಕಟ್ಟಡದ 3ನೇ ಅಂತಸ್ತಿನ ರೆಸ್ಟೋರೆಂಟ್ layout sketch ಹಾಗೂ ಕಟ್ಟಡ ಸಂಖ್ಯೆ:460 ಹೊಸ ನಂ.20/1ರ ಮಂಜೂರಾತಿ ನಕ್ಷೆಯನ್ನು ಲಗತ್ತಿಸಿ ನೀಡಿರುತ್ತಾರೆ.

ಕಟ್ಟಡದ ನಕ್ಷೆ ಮಂಜೂರಾತಿ ಬಗ್ಗೆ ಹಾಗೂ ಈ ಕಟ್ಟಡದ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಏನಾದರೂ ಇದ್ದ ಪಕ್ಷದಲ್ಲಿ ಸಮಗ್ರ ಮಾಹಿತಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು (ಜಯನಗರ)ರವರಿಂದ ಸಂಬಂಧಪಟ್ಟ ಅಧಿಕಾರಿಗಳು ಕೋರಿದ್ದು ಪಾಲಿಕೆಯಿಂದ ಎಲ್.ಪಿ.ಸಂಖ್ಯೆ:76/09-10 ದಿನಾಂಕ:2-9-2012 ರಂದು ಹಾಲಿ ಇದ್ದ ಬೆಸ್‌ಮೆಂಟ್, ನೆಲ ಮಹಡಿ,ಮೊದಲನೇ ಮಹಡಿಯ ಬದಲಾವಣೆಗಳೊಂದಿಗೆ ಎರಡನೇ ಮುಹಡಿ ಮತ್ತು ಟೆರೆಸ್‌ಮಹಡಿ ನಿರ್ಮಾಣ ಮಾಡಲು ನಕ್ಷೆ ಅನುಮೋದನೆ ಪಡೆದಿರುತ್ತಾರೆ ಹಾಗೂ ಮುಂದುವರೆದು ಕಟ್ಟಡವನ್ನು ಪರಿಶೀಲಿಸಲಾಗಿ ಕೆ.ಎಂ.ಸಿ ಕಾಯ್ದೆ 1976ರ ಕಾಲಂ 321(1) ಮತ್ತು (2) ಪ್ರಕಾರ ಕಟ್ಟಡದ ವ್ಯತಿರಿಕ್ತತೆ ಬಗ್ಗೆ ತಾತ್ಕಾಲಿಕ ಆದೇಶ ಹೊರಡಿಸಲಾಗಿರುತ್ತದೆ. ಪ್ರತಿಯಲ್ಲಿ ಕಟ್ಟಡದ ವ್ಯತಿರಿಕ್ತತೆ ಬಗ್ಗೆ ವಿವರಗಳನ್ನು ತಿಳಿಸಲಾಗಿದೆ ಎಂದು ಹಾಗೂ ಕಟ್ಟದ ಮಾಲೀಕರಾದ ಶ್ರೀಮತಿ.ಮಾನಸ ರವರು ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಬೆಂಗಳೂರು. ಇಲ್ಲಿ ಓ.ಎಸ್.ಸಂಖ್ಯೆ:25827/2012 ರಲ್ಲಿ ಪ್ರಕರಣ ದಾಖಲಿಸಿ ತಾತ್ಕಾಲಿಕ "ಮಧ್ಯಂತರ ಇಂಜಕ್ಷನ್" ಆದೇಶವನ್ನು ಪಡೆದಿರುತ್ತಾರೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು (ಜಯನಗರ)ರವರು ತಿಳಿಸಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ಸಂಬಂಧಪಟ್ಟ ಕಟ್ಟಡ ನಿರ್ಮಾಣದ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ಹಾಗೂ ಶ್ರೀ.ಸಂದೀಪ್ ಡಿ ರಟಾಡಿಯ ರವರು ಹೊಸದಾಗಿ ಪ್ರಾರಂಭಿಸುವ ವೆಚ್ ಬೈ ನೇಚರ್( Veg by nature) ಎಂಬ ರೆಸ್ಟೋರೆಂಟ್ ಉದ್ದಿಮೆಗೆ ಪರವಾನಗಿ ನೀಡಲು ಅವಕಾಶ ಇರುವುದಿಲ್ಲವೆಂದು ದಿನಾಂಕ:19-7-2012ರಂದು ಉಪ ಆರೋಗ್ಯಾಧಿಕಾರಿ(ದಕ್ಷಿಣ) ಜಯನಗರ ರವರು ಹಿಂಬರಹ ನೀಡಿರುತ್ತಾರೆ. ಅರ್ಜಿದಾರರು ಅಪೀಲು ಸ್ಥಾಯಿ ಸಮಿತಿಗೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಪ್ರಕರಣವನ್ನು ಕರೆಯಲಾಯಿತು ಅರ್ಜಿದಾರರು ಹಾಗೂ ಪ್ರತಿವಾದಿಗಳು ಹಾಜರಿದ್ದು, ಹಿರಿಯ ಅರೋಗ್ಯ ಪರಿವೀಕ್ಷಕರು ತಮ್ಮ ಹೇಳಿಕೆಯಲ್ಲಿ ಸ್ವತ್ತು ಜೈನ್ ದೇವಾಲಯಕ್ಕೆ ಹೊಂದಿಕೊಂಡಂತಿದ್ದು, ಈ ಸ್ವತ್ತು ವಸತಿಯೇತರ ಪ್ರದೇಶದಲ್ಲಿ ಬರುತ್ತದೆ. ಅರ್ಜಿದಾರರು ಉದ್ದಿಮೆ ಪರವಾನಗಿ ನೀಡುವಂತೆ ಕೋರಿದ್ದು ಪ್ರಕರಣವನ್ನು ಮಾಹಿತಿಗಾಗಿ ಮುಂದೂಡಿದೆ.

**ವಿಷಯ:ಸಂಖ್ಯೆ:ಅಸ್ಥಾಸ/(ಆ)/16/2012-13** ಆಯುಕ್ತರುರವರ ಟಿಪ್ಪಣಿ ದಿನಾಂಕ:30-08-2012ರ ರೀತ್ಯಾ

- ದಿನಾಂಕ07-08-2012 ಮಧ್ಯಾಹ್ನ ಮಾನ್ಯ ಅಧ್ಯಕ್ಷರು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ರವರು ಸಮಿತಿಯ ಸದಸ್ಯರೊಂದಿಗೆ ವಿದ್ಯಾರಣ್ಯಪುರದ ಮುಖ್ಯರಸ್ತೆಯಲ್ಲಿರುವ ಹೋಟೆಲ್ ಗಣೇಶ್ ದರ್ಶಿನಿ ಗೆ ಬಂದು ಉದ್ಯಮೆ ಪರವಾನಗಿ ಮತ್ತು ಶುಚಿತ್ವವಿಲ್ಲದೇ ಹೋಟೆಲ್ ನಡೆಸುತ್ತಿರುವುದನ್ನು ಗಮನಿಸಿ ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ.ದೇವಯ್ಯ ರವರನ್ನು ಸ್ಥಳಕ್ಕೆ ಕರೆಸಿಕೊಂಡು ಸದರಿ ಹೋಟೆಲ್ ಅನ್ನು ಮುಚ್ಚುತ್ತಿರುವಾಗ ಹೋಟೆಲ್ ಮಾಲೀಕರು ಇದಕ್ಕೆ ತಡೆಯೊಡ್ಡುತ್ತಿದ್ದುದನ್ನು ಗಮನಿಸಿ ಸ್ಥಳೀಯ ಪೋಲೀಸರನ್ನು ನಂತರ ಜಂಟಿ ಆಯುಕ್ತರು ರವರನ್ನು ಸ್ಥಳಕ್ಕೆ ಕರೆಸಿಕೊಂಡು ಸದರಿ ಹೋಟೆಲ್‌ನ ಮುಂಭಾಗಲಿನ ಬಾಗಿಲಿಗೆ ಬೀಗ ಮುದ್ರೆ ಹಾಕಲಾಗಿರುತ್ತದೆ.

- ಅದೇ ದಿನ ಕಟ್ಟಡದ ಮಾಲೀಕರಾದ ಶ್ರೀ.ಕೃಷ್ಣಮೂರ್ತಿಯವರು ಜಂಟಿ ಆಯುಕ್ತರು (ಬ್ಯಾಟರಾಯನಪುರ) ರವರ ಕಛೇರಿಗೆ ಬಂದು ಒಂದು ಅರ್ಜಿಯನ್ನು ನೀಡಿ ಸದರಿಯವರು ಹೋಟೆಲ್ ನಡೆಸುತ್ತಿರುವವರು ಶುಚಿತ್ವ ಮತ್ತು ಸಂಬಂಧಿಸಿದ ಪರವಾನಗಿಗಳು ಇಲ್ಲದೆ ನಡೆಸುತ್ತಿರುವುದರಿಂದ ದೂರನ್ನು ಸಲ್ಲಿಸಿರುತ್ತಾರೆ.

- ಈ ಸಂಬಂಧ ಅರ್ಜಿಯನ್ನು ಸಹ ಸಲ್ಲಿಸಿರುತ್ತಾರೆ ಹಿರಿಯ ಆರೋಗ್ಯ ಪರಿವೀಕ್ಷಕರು, ಹಾಲಿ ಉದ್ದಿಮೆ ನಡೆಸುತ್ತಿರುವವರಿಗೆ ನೋಟಿಸ್ ನೀಡದೇ ಬೇರೆಯವರಿಗೆ ನೋಟಿಸ್ ನ್ನು ಜಾರಿ ಮಾಡಿರುತ್ತಾರೆ ಮತ್ತು ಬೀಗ ಮುದ್ರೆ ಹಾಕಿರುವ ಕ್ರಮವು ಕ್ರಮಬದ್ಧವಾಗಿರುವುದಿಲ್ಲವಾದ್ದರಿಂದ ಉದ್ದಿಮೆ ನಡೆಸುತ್ತಿರುವ ಶ್ರೀ.ಎನ್.ನಾರಾಯಣ ರವರಿಗೆ ದಿನಾಂಕ:18-8-2012ರಂದು ಜಂಟಿ ಆಯುಕ್ತರು ಮತ್ತು ಆರೋಗ್ಯಾಧಿಕಾರಿಗಳ ಒಪ್ಪಿಗೆ ಪಡೆದು ಬೀಗವನ್ನು ಹಿಂದಿರುಗಿಸಲಾಗಿದೆ.

- ದಿನಾಂಕ:13-8-2012ರಂದು ಸದರಿ ಕಟ್ಟಡದ ಮಾಲೀಕರಾದ ಶ್ರೀ.ಕೃಷ್ಣಮೂರ್ತಿಯವರು ಬೀಗವನ್ನು ಯಾರಿಗೂ ಹಿಂದಿರುಗಿಸಬಾರದೆಂದು ಕೋರಿ ಪತ್ರ ನೀಡಿರುತ್ತಾರೆ. ಮಾನ್ಯ ಅಧ್ಯಕ್ಷರು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ರವರ ಕಛೇರಿಯಿಂದ ಸದರಿ ಹೋಟೆಲ್‌ನ ಬೀಗವನ್ನು ತಮಗೆ ನೀಡುವಂತೆ ಕೋರಿರುವ ಪತ್ರವನ್ನು ಸಹ ಪಡೆದಿದೆ.

- ಸದರಿ ಹೋಟೆಲ್ ಮಾಲೀಕರಾದ ಶ್ರೀ.ಎನ್.ನಾರಾಯಣ ಎಂಬುವವರಿಗೆ ದಿನಾಂಕ:21-8-2012 ರಂದು ಪರವಾನಿಗೆ ಅರ್ಜಿ ತಿರಸ್ಕರಿಸಿ ಹಿಂಬರಹ ಜಾರಿ ಮಾಡಲಾಗಿದೆ.

- ಸದರಿ ಹೋಟೆಲ್‌ನ ಮಾಲೀಕರಾದ ಶ್ರೀ.ಎನ್.ನಾರಾಯಣ ಎಂಬುವವರಿಗೆ ದಿನಾಂಕ:21-8-2012 ರಂದು ಜಂಟಿ ಆಯುಕ್ತರು(ಯಲಹಂಕ) ರವರ ಕಛೇರಿಗೆ ಕಾಲಾವಕಾಶ ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ. ಈ ಮೇರೆಗೆ ಸದರಿಯವರ ಉದ್ದಿಮೆಯೂ ಅನಧಿಕೃತವಾಗಿ ನಡೆಯುತ್ತಿರುವುದರಿಂದ ಕಾಲಾವಕಾಶ ನೀಡಲು ಬರುವುದಿಲ್ಲದ ಕಾರಣ ಮುಚ್ಚಿಸುವ ಕ್ರಮಕ್ಕೈಗೊಳ್ಳಲು ಮೇಲಾಧಿಕಾರಿಗಳ ಆದೇಶವಿರುತ್ತದೆ.

- ದಿನಾಂಕ: 27-08-2012ರಂದು ವಾರ್ಡ್ ಸಂಖ್ಯೆ.9 ಪರಿವೀಕ್ಷಣೆ ಸಮಯದಲ್ಲಿ ಸದರಿ ಉದ್ದಿಮೆಯು ಅನಧಿಕೃತವಾಗಿ ನಡೆಯುತ್ತಿರುವುದಾಗಿ ಕಂಡು ಬಂದಿರುವುದರಿಂದ ಸದರಿ ಹೋಟೆಲ್‌ನ್ನು ವ್ಯಾಪಾರ ಮಾಡದಂತೆ ಮುಚ್ಚಿಸಲಾಯಿತು.
- ಸದರಿ ಹೋಟೆಲ್‌ನ ಕಟ್ಟಡದ ಮುಂಭಾಗದಲ್ಲಿರುವ ಸುಮಾರು 15 ಅಡಿ ಅಗಲದ ದ್ವಾರ ಮತ್ತು ಸೆಟ್‌ಬ್ಯಾಕ್‌ನಲ್ಲಿ ಸುಮಾರು 4 ಅಡಿಯ ಪ್ರತ್ಯೇಕ ದ್ವಾರವಿದ್ದು, ದಿನಾಂಕ: 27-08-2012 ರಂದು ಮುಂಭಾಗದ ಬಾಗಿಲಿಗೆ ಬೀಗ ಮುದ್ರೆ ಹಾಕಲಾಗಿದೆ. ಉದ್ದಿಮೆದಾರರಾದ ಶ್ರೀ.ಎನ್.ನಾರಾಯಣ ರವರು ವ್ಯವಸ್ಥಾಪಕ ಸಿದ್ದಿಕ್ ರವರು ಸದರಿ ಹೋಟೆಲ್‌ನಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ವಿಲೇವಾರಿ ಮಾಡಲು ಮತ್ತು ಹೋಟೆಲ್‌ಗೆ ಅವಶ್ಯವಿರುವ ತರಕಾರಿಗಳನ್ನು ಸಾಗಿಸಲು 4 ಅಡಿ ಬಾಗಿಲನ್ನು ಉಪಯೋಗಿಸುತ್ತಿರುವುದಾಗಿ ತಿಳಿಸಿರುವುದರಿಂದ ಅದನ್ನು ಅವರ ವಶಕ್ಕೆ ಬಿಟ್ಟುಕೊಡಲಾಗಿದೆ.
- ಉದ್ದಿಮೆ ಪರವಾನಗಿಯನ್ನು ಹೊಂದದೇ ಹೋಟೆಲ್‌ನ್ನು ನೆಡೆಸುತ್ತಿದ್ದ ಶ್ರೀ.ಎನ್.ನಾರಾಯಣ ರವರು Electronic ಮಾಧ್ಯಮ ಟಿ.ವಿ.-9,ಸುವರ್ಣ ವಾಹಿನಿ,ಪಬ್ಲಿಕ್ ಟಿ.ವಿ ಮತ್ತು ಮುದ್ರಣ ಮಾಧ್ಯಮಗಳಿಗೆ ಹೋಟೆಲ್‌ನ ಗ್ರಾಹಕರಿಗೆ ಸೇರಿಸಿ ಬೀಗ ಮುದ್ರೆ ಹಾಕಲಾಗಿದೆಯೆಂದು ಸುಳ್ಳು ಮಾಹಿತಿ ಪ್ರಸಾರವಾಗುತ್ತಿದೆ. ತಮ್ಮ ಉದ್ದಿಮೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ನೌಕರರು ಮತ್ತು ಸಾರ್ವಜನಿಕರಿಗೆ ಕಟ್ಟಡದ ಒಳಗೆ ಕೂಡಿಹಾಕಿ ಉಪ ಆರೋಗ್ಯಾಧಿಕಾರಿಯವರು ಬೀಗ ಮುದ್ರೆ ಹಾಕಿರುತ್ತಾರೆಂದು ಮಾಹಿತಿ ನೀಡಿರುತ್ತಾರೆ. ಇಂತಹ ಯಾವುದೇ ಕ್ರಮವನ್ನು ಉಪ ಆರೋಗ್ಯಾಧಿಕಾರಿಯವರು ಮಾಡಿರುವುದಿಲ್ಲ.

- Electronic ಮಾಧ್ಯಮಗಳಲ್ಲಿ ರಾತ್ರಿ ಸುಮಾರು 11.30ಕ್ಕೆ ಸದರಿ ಕಟ್ಟಡದಲ್ಲಿ ಕೂಡಿ ಹಾಕಲಾಗಿದೆಯೆಂಬ ಮಾಹಿತಿಯನ್ನು ಭಿತ್ತರಿಸಿದ ನಂತರ ಜಂಟಿ ಆಯುಕ್ತರು(ಯಲಹಂಕ) ರವರ ಕಛೇರಿಯ ಪ್ರಹರಿ ವಾಹನವನ್ನು ಮತ್ತು ಸಿಬ್ಬಂದಿಗಳನ್ನು ವಿಚಾರಿಸಿದಾಗ ಸದರಿ ಹೋಟೆಲ್‌ನ ಚಿಕ್ಕ ಬಾಗಿಲಕ್ಕೆ ಯಾವುದೇ ಬೀಗ ಮುದ್ರೆ ಹಾಕಿರುವುದಿಲ್ಲ ಎಂಬುದನ್ನು ಖಾತ್ರಿ ಪಡಿಸಿಕೊಂಡು ಅವರ ಈ ವರ್ತನೆ ಬಗ್ಗೆ ಸ್ಥಳೀಯ ಪೋಲೀಸರಿಗೂ ಸಹ ಮೌಖಿಕವಾಗಿ ಈ ಬಗ್ಗೆ ಮಾಹಿತಿ ನೀಡಲಾಗಿರುತ್ತದೆ.

- ಕೆ.ಎಂಸಿ ಕಾಯ್ದೆ 353,354,447ರ ಅನ್ವಯ ಕಟ್ಟಡದ ಮಾಲೀಕರು ಆಕ್ಷೇಪಣೆ ವ್ಯಕ್ತ ಪಡಿಸಿರುವುದರಿಂದ ಉದ್ದಿಮೆ ಪರವಾನಗಿ ನೀಡಲು ಸಾಧ್ಯವಿಲ್ಲ. ಈ ಬಗ್ಗೆ ಹಿಂಬರಹ ನೀಡಲಾಗಿದ್ದು, ತಿರಸ್ಕರಿಸಲು ಕೋರಿ, ಮೇಲ್ಮನವಿಯ ನಿರ್ಣಯಕ್ಕಾಗಿ/ತೀರ್ಮಾನಕ್ಕಾಗಿ, ಟಿಪ್ಪಣಿ ಮಂಡಿಸಿದೆ.

ಪ್ರಕರಣವನ್ನು ಕರೆಯಲಾಯಿತು ಅರ್ಜಿದಾರರು ಗೈರುಹಾಜರಾಗಿದ್ದು, ಪ್ರತಿವಾದಿಗಳಾದ ಉಪ ಆರೋಗ್ಯಾಧಿಕಾರಿ(ಯಲಹಂಕ)ಇವರು ಹಾಜರಾಗಿದ್ದು ಉದ್ದಿಮೆ ಪರವಾನಗಿಯನ್ನು ನೀಡಲು ಅಕ್ಕ-ಪಕ್ಕದ ನಿವಾಸಿಗಳಿಂದ ನಿರಾಕ್ಷೇಪಣಾ ಪತ್ರವು ಅಗತ್ಯವಿದ್ದು ಹಾಜರು ಪಡಿಸದೆ ಇರುವುದರಿಂದ ಪರವಾನಗಿಯನ್ನು ನೀಡಿರುವುದಿಲ್ಲ ಎಂಬುದಾಗಿ ತಿಳಿಸಿದ್ದು ಪ್ರಕರಣವನ್ನು ಮುಂದೂಡಲಾಯಿತು.

**<u>ವಿಷಯ:ಸಂಖ್ಯೆ:ಅಸ್ಥಾಸ/(ಕಾ)/21/2012-13</u>** ಅಪರ ಆಯುಕ್ತರುರವರ ಟಿಪ್ಪಣಿ ದಿನಾಂಕ:29-09-2012ರ ರೀತ್ಯಾ ಚಾಮರಾಜಪೇಟೆ ವಾರ್ಡ್ ಸಂಖ್ಯೆ:140, ಸ್ವತ್ತಿನ ಸಂಖ್ಯೆ:96 ಶಿರ್ಸಿ ರಸ್ತೆ, ಇಲ್ಲಿ ನಿರ್ಮಿಸಿರುವ ಅಪಾರ್ಟ್‌ಮೆಂಟ್ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ರಸ್ತೆ ಕತ್ತರಿಸುವಿಕೆ ಪರವಾನಗಿ ನೀಡುವ ಬಗ್ಗೆ

ಈ ಕೆಳಕಂಡ ವಿವರ ಟಿಪ್ಪಣಿಯೊಂದಿಗೆ ಕಡತಗಳನ್ನು ಅಪೀಲು ಸ್ಥಾಯಿ ಸಮಿತಿ ಮುಂದೆ ಸಲ್ಲಸಲಾಗಿದೆ.

ಸದರಿ ಸ್ವತ್ತಿನ ಸಂಖ್ಯೆ:96 ಶಿರ್ಸಿ ರಸ್ತೆ, ವಾರ್ಡ್ ಸಂಖ್ಯೆ:140, ಚಾಮರಾಜಪೇಟೆ ಇಲ್ಲಿ ಶ್ರೀ.ಕೆ.ಜಿ.ಶಶಿಧರ್ ರವರಿಗೆ L.P.No.JC(W)GN/165/07-08, Dated:04-12-2007ರಲ್ಲಿ ನಗರ ಯೋಜನೆ ವಿಭಾಗ( ಪಶ್ಚಿಮ) ದಿಂದ (ತಳ+ಒಂದು+ಎರಡು+ಮೂರು+ಟೆರೇಸ್ ಫ್ಲೋರ್)ನ ಅಪಾರ್ಟ್‌ಮೆಂಟ್ ಕಟ್ಟಡ ನಿರ್ಮಿಸಲು ನಕ್ಷೆಗೆ ಮಂಜೂರಾತಿ ನೀಡಲಾಗಿದೆ. ಆದರೆ, ಸದರಿ ಸ್ವತ್ತಿನ ಮಾಲೀಕರು ಮಂಜೂರಾದ ನಕ್ಷೆಗೆ ವಿರುದ್ಧವಾಗಿ ಕೆ.ಎಂ.ಸಿ ಕಾಯ್ದೆ 1976ರ ಬೈಲಾಗಳಿಗೆ ವಿರುದ್ದವಾಗಿ ನೆಡುಜಾಗಗಳಲ್ಲಿ ಶೇಕಡ 29.49 ರಷ್ಟು ಉಲ್ಲಂಘನೆ ಮಾಡಿ ಕಟ್ಟಡ ನಿರ್ಮಿಸುವುದರೊಂದಿಗೆ ನಕ್ಷೆಗೆ ವ್ಯತಿರಿಕ್ತವಾಗಿ 4ನೇ ಮಹಡಿಯನ್ನು ಹೆಚ್ಚುವರಿಯಾಗಿ ನಿರ್ಮಿಸಿರುತ್ತಾರೆ. ಈ ಬಗ್ಗೆ ಸಹಾಯಕ ನಿರ್ದೇಶಕರು ನಗರ ಯೋಜನೆ ವಿಭಾಗ( ಪಶ್ಚಿಮ) ರವರು ಕೆ.ಎಂ.ಸಿ ಕಾಯ್ದೆ 1976ರಂತೆ ಪಿ.ಓ.ಮತ್ತು ಸಿ.ಓ ನೋಟೀಸನ್ನು ಜಾರಿಗೊಳಿಸಿದ್ದಾರೆ. ಸದರಿ ಸ್ವತ್ತಿನ ಮಾಲೀಕರು ಸದರಿ ನೋಟೀಸುಗಳನ್ನು ಆಧಾರವಾಗಿ ಇಟ್ಟುಕೊಂಡು ಕೆ.ಎ.ಟಿ ನ್ಯಾಯಾಲಯ ಅಪೀಲು ಸಂಖ್ಯೆ:68/2011 ದಿನಾಂಕ:31-01-2011ರಲ್ಲಿ ಯಥಾಸ್ಥಿತಿ ಆದೇಶ ಪಡೆದು ಸದರಿ ಆದೇಶವನ್ನು ಇಟ್ಟುಕೊಂಡು ಕಟ್ಟಡ ನಿರ್ಮಿಸುತ್ತಿರುವುದನ್ನು ಪರಿಶೀಲಿಸಿ ಕಟ್ಟಡ ನಿರ್ಮಿಸದಂತೆ ಲಿಖಿತ ನೋಟೀಸನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಜಾರಿಗೊಳಿಸುವುದರೊಂದಿಗೆ ದಿನಾಂಕ:23-03-2011 ರಲ್ಲಿ ಚಾಮರಾಜಪೇಟೆ ಪೋಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿ ಕಾಮಗಾರಿಯನ್ನು ಸ್ಥಗಿತಗೊಳಿಸಿರುತ್ತಾರೆ. ಆದರೆ, ಸದರಿ ಸ್ವತ್ತಿನ ಮಾಲೀಕರಾದ ಶ್ರೀ.ಕೆ.ಜಿ.ಶಶಿಧರ್ ರವರ ಸಹಭಾಗಿತ್ವದ ಜಂಟಿ ಕಟ್ಟಡ ಪಾಲುದಾರರಾದ OM SAI BUILDERS ರವರ ಸಿಟಿ ಸಿವಿಲ್ ನ್ಯಾಯಾಲಯ ಓ.ಎಸ್.ನಂ.2592/2011 ದಿನಾಂಕ:05-04-2011 ರಲ್ಲಿ ತಾತ್ಕಾಲಿಕ ಇಂಜಕ್ಷನ್ ಆದೇಶ ತಂದು ಕಟ್ಟಡ ಕಾಮಗಾರಿ ನಿರ್ವಹಿಸಿರುತ್ತಾರೆ. ಸದರಿ ದಾವೆಗಳು ಇನ್ನೂ ಇತ್ಯರ್ಥವಾಗದೆ ನ್ಯಾಯಾಲಯಗಳಲ್ಲಿ ಬಾಕಿ ಇರುತ್ತವೆ ಈ ಬಗ್ಗೆ ಸದರಿ ಅಪಾರ್ಟ್‌ಮೆಂಟ್ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ರಸ್ತೆ ಕತ್ತರಿಸುವಿಕೆ ಪರವಾನಗಿ ಕೋರಿ ಸ್ವತ್ತಿನ ಮಾಲೀಕರು ದಿನಾಂಕ:24-03-2012ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರು ಉಪವಿಭಾಗಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿ ಬಗ್ಗೆ ವಿವರ ವರದಿಯೊಂದಿಗೆ ಕಾನೂನು ಕೋಶದ ಅಭಿಪ್ರಾಯ ಕೋರಿ ಕಡತ ಮಂಡಿಸಿ ಈ ವಿಷಯವನ್ನು ತಿಳಿಸಿ ಶ್ರೀ.ಕೆ.ಜಿ.ಶಶಿಧರ್ ರವರಿಗೆ ಲಿಖಿತ ಹಿಂಬರಹ ಪತ್ರವನ್ನು ದಿನಾಂಕ:05-04-2012ರಲ್ಲಿ ನೀಡಲಾಗಿದೆ.ಆದರೆ ಕಾನೂನು ಸಲಹೆ ಬರುವ ಮೊದಲೆ ಸ್ವತ್ತಿನ ಮಾಲೀಕರು ದಿನಾಂಕ:14-04-2012ರ ಎರಡನೇ ಶನಿವಾರದಂದು ಅನಧಿಕೃತವಾಗಿ 365.00 ಮೀ ಉದ್ದಕ್ಕೆ ಶಿರ್ಸಿ ರಸ್ತೆಯಲ್ಲಿ ಹೆಚ್.ಡಿ.ಡಿ ಮಾದರಿ ಯಂತ್ರದಿಂದ ಸುರಂಗ ಕೊರೆದು ವಿದ್ಯುತ್ ಕೇಬಲನ್ನು ಅಳವಡಿಸಿರುತ್ತಾರೆ. ಇದನ್ನು ಪರಿಶೀಲಿಸಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರ ಉಪವಿಭಾಗದಿಂದ ಅಪರ ಆಯುಕ್ತರು(ಪಶ್ಚಿಮ) ರವರಿಗೆ ವರದಿ ಸಲ್ಲಿಸಿ ಅನುಮೋದನೆ ಪಡೆದು ರಸ್ತೆ ಕತ್ತರಿಸುವಿಕೆಗೆ ರೂ.1,09,500-00(ರೂ.ಒಂದು ಲಕ್ಷದ ಒಂಭತ್ತು ಸಾವಿರದ ಐದು ನೂರು ಮಾತ್ರ) ಮತ್ತು ಅನಧಿಕೃತವಾಗಿ ರಸ್ತೆ ಕತ್ತರಿಸುವಿಕೆಗೆ ರೂ.1,00,000-00 (ರೂ.ಒಂದು ಲಕ್ಷ ಮಾತ್ರ) ಗಳ ದಂಡ ವಿಧಿಸಿ ಒಟ್ಟು ರೂ.2,09,500-00 ಗಳನ್ನು ಬಿಬಿಎಂಪಿ ಗೆ

ಪಾವತಿಸುವಂತೆ ಸ್ವತ್ತಿನ ಮಾಲೀಕರಿಗೆ ದಿನಾಂಕ:30-05-2012 ಮತ್ತು 25-06-2012 ರಲ್ಲಿ ಎರಡು ನೋಟೀಸ್‌ಗಳನ್ನು ಜಾರಿಗೊಳಿಸಲಾಗಿದೆ. ಆದರೆ, ಸ್ವತ್ತಿನ ಮಾಲೀಕರು ಇದಕ್ಕೆ ಸ್ಪಂದಿಸಿ ದಂಡದ ಮೊಬಲಗನ್ನು ಪಾವತಿಸಿರುವುದಿಲ್ಲ. ಸದರಿ ಮೊಬಲಗನ್ನು ಭೂಕಂದಾಯ ರೂಪದಲ್ಲಿ ವಸೂಲು ಮಾಡಲಾಗುವುದು ಎಂಬುದನ್ನು ಅವಗಾಹನೆಗೆ ತರಲಾಗಿದೆ.

ಸದರಿ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕಾನೂನು ಕೋಶದ ಕಾನೂನು ಸಲಹೆಯಂತೆ ಕಟ್ಟಡಕ್ಕೆ ವಾಸಯೋಗ್ಯ ( Occupancy certificate) ಪ್ರಮಾಣ ಪತ್ರ ಸಲ್ಲಿಸಿದ ನಂತರ ಅರ್ಜಿದಾರರ ಕೋರಿಕೆಯನ್ನು, ಪರಿಶೀಲಿಸಿ ನಂತರ ಅರ್ಜಿದಾರರ ಕೋರಿಕೆಯನ್ನು ಪರಿಶೀಲಿಸಲಾಗುವುದು ಎಂಬುವ ಲಿಖಿತ ಹಿಂಬರಹವನ್ನು ದಿನಾಂಕ:10-05-2012 ರಂದು ನೀಡಲಾಗಿದೆ. ಆದರೆ ಇಲ್ಲಿಯತನಕ ವಾಸಯೋಗ್ಯ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ ಹಾಗೂ ದಂಡದ ಮೊಬಲಗನ್ನು ಪಾವತಿಸಿರುವುದಿಲ್ಲ ಹಾಗೂ ಸ್ವತ್ತಿನ ಮಾಲೀಕರು ಮತ್ತು ಇವರ ಜಂಟಿ ಸಹಭಾಗಿತ್ವದ ಪಾಲುದಾರರು ನ್ಯಾಯಾಲಯಗಳಲ್ಲಿ ಹೂಡಿರುವ ದಾವೆಗಳು ಇನ್ನು ಇತ್ಯರ್ಥವಾಗದೆ ಬಾಕಿ ಇರುತ್ತದೆ. ಆದುದರಿಂದ ರಸ್ತೆ ಕತ್ತರಿಸುವಿಕೆ ಪರವಾನಗಿ ನೀಡದೆ ತಡೆಹಿಡಿಯ ಲಾಗಿದೆ ಎಂಬುದಾಗಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಚಾಮರಾಜಪೇಟೆ ಉಪವಿಭಾಗ ರವರ ವರದಿಯ ಅಂಶಗಳನ್ನು ಸ್ಥಾಯಿ ಸಮಿತಿ ಮುಂದೆ ಅವಗಾಹನೆಗೆ ಮಂಡಿಸಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಹಾಜರಾಗಿದ್ದು ಅವರ ಪರವಾಗಿ ಶ್ರೀ.ಪಿ.ಎಸ್.ಸುರೇಶ ವಕೀಲರ ಹೇಳಿಕೆಯನ್ನು ಪಡೆಯಲಾಯಿತು. ಶ್ರೀ.ಪ್ರಸನ್ನಕುಮಾರ್ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:140 ಪ್ರತಿ ನಿಧಿಸುತ್ತಿರುವುದಾಗಿ ತಿಳಿಸುತ್ತಾ ಪ್ರತಿವಾದಿಗಳು ತಮ್ಮ ಹೇಳಿಕೆಯಲ್ಲಿ ಮನವಿದಾರರು ರಸ್ತೆ ಅಗೆಯಲು ಅನುಮತಿ ನೀಡಿರುವುದಕ್ಕಿಂತಲು ಹೆಚ್ಚಿನ ಅಳತೆಯ ರಸ್ತೆಯನ್ನು ಅಗೆಯಲಾಗಿದ್ದು ಅದಕ್ಕಾಗಿ ದಂಡ ವಿಧಿಸಿರುವುದಾಗಿ ತಿಳಿಸಿದರು.

ಸ್ಥಳ ಪರಿಶೀಲನೆಗಾಗಿ ಮುಂದೂಡಲಾಯಿತು.

**<u>ವಿಷಯ:ಸಂಖ್ಯೆ:ಅಸ್ಥಾಸ/(ಖಾ)/17/2012-13</u>** ಶ್ರೀ.ಚೆನ್ನಪ್ಪ ಸರ್ವೆ ನಂ.14/12 ತಾವರೆಕೆರೆ ಗ್ರಾಮ, ಬೇಗೂರು ಹೋಬಳಿ ದಕ್ಷಿಣ ತಾಲ್ಲೂಕು ಇದರ ಖಾತಾ ವರ್ಗಾವಣೆಗೆ ಸಂಬಂಧಿಸಿದಂತೆ ಜಂಟಿ ಆಯುಕ್ತರು(ದಕ್ಷಿಣ) ಇವರ ಆದೇಶದ ದಿನಾಂಕ: 13-6-2012 ಮೇಲ್ಮನವಿ ಕುರಿತು.

ಪ್ರಕರಣವನ್ನು ಕರೆಯಲಾಯಿತು ಅರ್ಜಿದಾರರ ಪರವಾಗಿ ಶ್ರೀ.ಆರ್.ಬಿ.ಎಸ್.ನ್ಯಾಯಾವಾದಿಗಳು ವಕಾಲತ್ತು ದಾಖಲಿಸಿದ್ದು ಖಾತೆಯನ್ನು 6:1/2 ವರ್ಷಗಳ ಅವಧಿಯ ನಂತರ ಖಾತೆಯನ್ನು ರದ್ದುಗೊಳಿಸಿರುವುದಾಗಿಯೂ ಕೆ.ಎಂ.ಸಿ ಕಾಯ್ದೆ ಸೆಕ್ಷನ್ 114/ಎ ಸಂಬಂಧಪಟ್ಟ ಜಂಟಿ ಆಯುಕ್ತರು (ದಕ್ಷಿಣ) ಇವರಿಗೆ 3 ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಖಾತೆಯನ್ನು ರದ್ದುಗೊಳಿಸಲು ಆಧಿಕಾರವಿರುವುದಿಲ್ಲ. ಅರ್ಜಿದಾರರು ರೂ.4,72,000/-ಗಳ ಅಭಿವೃದ್ಧಿ ಶುಲ್ಕವನ್ನು ಪಾವತಿಸಿದ್ದು, ದಾಖಲೆಗಳನ್ನು ಪರಿಶೀಲಿಸಿದ ತರುವಾಯ ಖಾತೆಯನ್ನು ದಾಖಲಿಸಿದ್ದು ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರು ಸ್ವತ್ತನ್ನು ಸ್ವಾದೀನಕ್ಕೆ ಸಂಬಂಧಿಸಿದಂತೆ ನಿರಾಕ್ಷೇಪಣೆ ಪತ್ರವನ್ನು ನೀಡಿದ್ದು ಹಾಗೂ ನ್ಯಾಯಾವಾದಿಗಳು ಮುಂದುವರೆದಂತೆ ಜಂಟಿ ಆಯುಕ್ತರು(ದಕ್ಷಿಣ) ರವರಿಗೆ 6 ವರ್ಷಗಳ ಅನಂತರದಲ್ಲಿ

ಖಾತೆಯನ್ನು ರದ್ದುಗೊಳಿಸಬಹುದೆಂಬುದಕ್ಕೆ ಪರಿಶೀಲನೆಯನ್ನು ಮಾಡಿರುವುದಿಲ್ಲ. ಆದೇಶವನ್ನು ಹೊರಡಿಸುವುದಕ್ಕೆ ಮುಂಚಿತವಾಗಿ ತಮ್ಮ ಅಧಿಕಾರ ವ್ಯಾಪ್ತಿಯ ಬಗ್ಗೆ ಗಮನಹರಿಸಿರುವುದಿಲ್ಲ, ಇದರಲ್ಲಿ ಯಾವುದೇ Misrepresentation ಅಗಿರುವುದಿಲ್ಲ ದಾಖಲೆಗಳ ಆಧಾರದ ಮೇಲೆ ಖಾತೆಯನ್ನು ದಾಖಲಿಸಿದ್ದು. 3 ವರ್ಷದ ಅವಧಿಯೊಳಗೆ ಇದ್ದಲ್ಲಿ ಮಾತ್ರ ಖಾತೆಯನ್ನು ರದ್ದುಗೊಳಿಸಬಹುದೆ ಹೊರತು ಅನಂತರದಲ್ಲಿ ರದ್ದುಗೊಳಿಸಲು ಬರುವುದಿಲ್ಲ. ಈ ಪ್ರಕರಣದಲ್ಲಿ 6 ವರ್ಷ ಕಳೆದ ನಂತರ ಖಾತೆಯನ್ನು ರದ್ದುಗೊಳಿಸುವ ಕ್ರಮ ಸರಿಯಾಗಿರುವುದಿಲ್ಲ, ಅದ್ದುರಿಂದ ಅರ್ಜಿದಾರರು ತಹಲ್‌ವರೆವಿಗೆ ತೆರಿಗೆಯನ್ನು ಪಾವತಿಸಿದ್ದು ಕಾನೂನು ಪ್ರಕಾರ ಜಂಟಿ ಆಯುಕ್ತರು (ದಕ್ಷಿಣ) ರವರು ಖಾತೆಯನ್ನು ರದ್ದುಗೊಳಿಸದಿರುವುದು ಕಾನೂನು ಬಾಹಿರವಾಗಿರುತ್ತದೆ.

ಸಹ ಕಂದಾಯಾಧಿಕಾರಿ(ಬಿ.ಟಿ.ಎಂ) ಇವರು ಹಾಜರಿದ್ದು ಅಭಿವೃದ್ದಿ ಶುಲ್ಕ ಪಾವತಿಸಿಕೊಂಡು ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರಿಂದ ನಿರಾಕ್ಷೇಪಣೆ ಪತ್ರವನ್ನು ಸ್ವೀಕರಿಸಿದ ಖಾತೆಯನ್ನು ದಾಖಲಿಸಿರುವುದಾಗಿ ತಿಳಿಸಿದರು.

ಅದ್ದುರಿಂದ ಸಂಬಂಧಪಟ್ಟ ಕಡತವು ಅಗತ್ಯವಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

<u>**ವಿಷಯ:ಸಂಖ್ಯೆ:ಅಸ್ಥಾಸ/(ಕ)/20/2012-13:**</u> ಶ್ರೀಮತಿ.ಪಿ.ಮೇರಿ ವೇರೋನಿಕಾ ಡಾಟರ್: ಅಫ್.ಅನ್‌ಸ್ತೀಷ್ಠೀಯ ಪಾಲ್ ಸ್ವತ್ತಿನ ಸಂಖ್ಯೆ: 405 ಅಸ್ಟಿನ್ ಟೌನ್ ವಾರ್ಡ್ ನಂ.114 ಬಾಡಿಗೆ ಗುತ್ತಿಗೆ ವರ್ಗಾವಣೆ ಮಾಡವುದಕ್ಕೆ ಸಂಬಂಧಿಸಿದಂತೆ ಸಹ ಕಂದಾಯಾಧಿಕಾರಿ (ದೂಮ್ಮಲೂರು) ವಲಯ ಇವರು ನೀಡಿರುವ ಅಂತಿಮ ಹಿಂಬರಹ ದಿನಾಂಕ: 23-6-2011ರ ವಿರುದ್ದ ಮೇಲ್ಮನವಿ ಕುರಿತು.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಗೈರುಹಾಜರಾಗಿದ್ದು ಪ್ರತಿವಾದಿಗಳು ಹಾಜರಿದ್ದು ಹೊಸದಾಗಿ ಆಯುಕ್ತರವರ ಮುಂಖಾಂತರ ನೋಟೀಸ್ ಜಾರಿ ಮಾಡುವುದೆಂದು ಹಾಗೂ ದಾಖಲೆಗಳನ್ನು ಪಡೆಯಲು ಪ್ರಕರಣವನ್ನು ಮುಂದೂಡಲಾಯಿತು.

(ಪುಟ್ಟಮ್ಮ)
ಅಧ್ಯಕ್ಷರು
ಅಪೀಲುಗಳ ಸ್ಥಾಯಿ ಸಮಿತಿ